ಪ್ರಜಾವಾಣಿ

Saturday, May 8th, 2010

## ಕ್ರಿಕೆಟ್: ಎಸ್‌ಬಿಎಂಜೆಸಿಇ ಚಾಂಪಿಯನ್

**ಬೆಂಗಳೂರು:** ಆತಿಥೇಯ ಶ್ರೀ ಭಗವಾನ್ ಮಹಾವೀರ್ ಜೈನ್ ಎಂಜಿನಿಯರಿಂಗ್ ಕಾಲೇಜು (ಎಸ್‌ಬಿಎಂಜೆಸಿಇ) ತಂಡದವರು ಗುರುವಾರ ಇಲ್ಲಿ ಕೊನೆಗೊಂಡ ಅಂತರ ಎಂಜಿನಿಯರಿಂಗ್ ಕಾಲೇಜು ಟ್ವೆಂಟಿ-20 ಕ್ರಿಕೆಟ್ ಟೂರ್ನಿಯನ್ನು ಗೆದ್ದುಕೊಂಡರು.

ಜೈನ್ ಗ್ಲೋಬಲ್ ಕ್ಯಾಂಪಸ್‌ನ ಅಂಗಳದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಸ್‌ಬಿಎಂಜೆಸಿಇ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 127 ರನ್ ಪೇರಿಸಿದರೆ, ಎದುರಾಳಿ ತಂಡ 19.5 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟಾಯಿತು.